ಮೂರ್ನಾಲ್ಕು ಇಂಜೆಕ್ಷನ್ ಕೊಟ್ಟ. ನಾಲ್ಕೈದು ನಿಮಿಷ ಕಳೆಯುವುದರೊಳಗಾಗಿ ಶರಣಪ್ಪ ಕೊಂಚ ಚೇತರಿಸಿಕೊಂಡ. ಹೋಗುತ್ತಿದ್ದ ಜೀವ ಉಳಿದ ಭಾವನೆಯನ್ನು ತನ್ನ ಮುಖದಲ್ಲಿ ವ್ಯಕ್ತಪಡಿಸಿದ. ಕೃತಜ್ಞತೆಯಿಂದ ಹಾಸಿಗೆ ಮೇಲಿಂದಲೇ ಕಣ್ಣೀರು ತುಂಬಿಕೊಂಡು ಕೃಷ್ಣನಿಗೆ ವಂದಿಸಿದ. ಶರಣಪ್ಪನ ವರ್ತನೆ ಕೃಷ್ಣನನ್ನು ಕಸಿವಿಸಿಗೊಳಿಸಿತು. ಮರುಮಾತನಾಡದೆ ಅವನ ಕೈಹಿಡಿದು ಧೈರ್ಯ ತುಂಬಿದ. ಪ್ರಾಣಕ್ಕೆ ಅಪಾಯ ಇಲ್ಲ ಎಂಬುದನ್ನು ದೃಢಪಡಿಸಿಕೊಂಡ ನಂತರ, ಬೇರೊಂದು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದ. ಅಲ್ಲಿಯೂ ತಾನೇ ಚಿಕಿತ್ಸೆ ನೀಡಿದ.


ಇಷ್ಟೆಲ್ಲಾ ಮುಗಿಯುವುದರೊಳಗಾಗಿ ಮಧ್ಯರಾತ್ರಿ ದಾಟಿತ್ತು. ಆಗ ಹೊಟ್ಟೆಯ ಹಸಿವು ಕಾಡಿತು. ತಿನ್ನಲು ಎಲ್ಲಿಯೂ ಏನು ಸಿಗಲಿಲ್ಲ. ವಿಧಿಯಿಲ್ಲದೆ ಒಂದಷ್ಟು ನೀರು ಕುಡಿದ. ತಾನು ಸುಧಾರಿಸಿಕೊಂಡು, ಆಸ್ಪತ್ರೆಯ ಸಿಬ್ಬಂದಿಗೆ ಬೆಳಿಗ್ಗೆ ಬರುವುದಾಗಿ ಹೇಳಿ ಮನೆಗೆ ಹೋದ. ಎಲ್ಲರೂ ಮಲಗಿದ್ದರು. ಒಮ್ಮೆ ಡೈನಿಂಗ್ ಹಾಲ್‌ನತ್ತ ಕಣ್ಣಾಡಿಸಿದ. ಪಾತ್ರೆಯಲ್ಲಿನ ಆಹಾರ ಹಾಗೆಯೇ ಇತ್ತು. ಮನೆಯವರು ಅರ್ಧ ಹೊಟ್ಟೆಯಲ್ಲೇ ಮಲಗಿದ್ದು ಕೃಷ್ಣನಿಗೆ ತಕ್ಷಣಕ್ಕೆ ನೋವುಂಟು ಮಾಡಿದರೂ; ತನ್ನ ವೃತ್ತಿಯೇ ಅಂತಹದ್ದು. ಹೊಟ್ಟೆ ತುಂಬಾ ಊಟ ಮಾಡಬಾರದೆ ಎಂದು ಮನಸ್ಸಿನಲ್ಲೇ ಗೊಣಗಿಕೊಂಡ. ನನ್ನ ಊಟ ತಪ್ಪಿದರೂ ಒಂದು ಜೀವ ಉಳಿಸಿದ ಸಾರ್ಥಕಭಾವ ಮನದಲ್ಲಿತ್ತು. ಮಲಗಿದ್ದಷ್ಟೇ ನೆನಪು. ಬೆಳಿಗ್ಗೆ ಒಂಬತ್ತು ಗಂಟೆಯಾದರೂ ಎಚ್ಚರವಿಲ್ಲ. ಪತ್ನಿಯೂ ಮಲಗಿದ್ದವನನ್ನು ಎಚ್ಚರಿಸುವ ಕೆಲಸ ಮಾಡಿರಲಿಲ್ಲ. ಮಕ್ಕಳನ್ನು ಅತ್ತ ಬಿಟ್ಟಿರಲಿಲ್ಲ.

ಒಂಬತ್ತು ದಾಟುತ್ತಿದ್ದಂತೆ ಬಿಸಿ ಬಿಸಿ ಕಾಫಿ ಹಿಡಿದು ಬೆಡ್‌ರೂಂಗೆ ಬಂದ ರುಕ್ಮಿಣಿ, ಮಲಗಿದ್ದ ಕೃಷ್ಣನ ಹಣೆಗೊಂದು ಹೂ ಮುತ್ತು ಕೊಟ್ಟಳು. ಹೆಂಡತಿಯ ಸ್ಪರ್ಶದಿಂದ ಎಚ್ಚರಗೊಂಡ ಕೃಷ್ಣನು ಪ್ರತಿಯಾಗಿ ರುಕ್ಮಿಣಿಯನ್ನು ತಬ್ಬಿಕೊಂಡ. 'ದೇವ್ರೇ, ದೇವ್ರೇ... ನಾ ಸ್ನಾನ ಮಾಡಿದ್ದೀನಿ. ಪೂಜೆ ಮಾಡಬೇಕು. ನನ್ನನ್ನು ಬಿಡಿ. ಕಾಫಿ ಕುಡಿದು ನೀವು ಸ್ನಾನ ಮಾಡಿಕೊಂಡು ಬನ್ನಿ. ಅಷ್ಟರೊಳಗೆ ಮಂಗಳಾರತಿಗೆ ರೆಡಿ ಮಾಡಿರುತ್ತೇನೆ' ಎಂದೇಳಿ ಹೊರಡಲು ಅನುವಾದಳು. 'ಟೈಂ ಎಷ್ಟಾಗಿದೆ' ಎಂದ ಕೃಷ್ಣ. ರುಕ್ಮಿಣಿಯು ಒಂಬತ್ತು ಗಂಟೆ ಎನ್ನುತ್ತಿದ್ದಂತೆ ಗಡಿಬಿಡಿಯಿಂದ ಎದ್ದ. ಬೇಗ ಸ್ನಾನ ಮಾಡಿಕೊಂಡು ಬರುತ್ತೇನೆ. ತಿಂಡಿ ರೆಡಿಯಿದೆ ತಾನೇ' ಎಂದ.

ಸ್ನಾನ ಮುಗಿಸಿಕೊಂಡು ಬಂದ ಕೃಷ್ಣ, ಮಂಗಳಾರತಿ ತೆಗೆದುಕೊಂಡ ನಂತರ ಬಟ್ಟೆ ಹಾಕಿಕೊಳ್ಳಲು ತನ್ನ ರೂಮಿಗೆ ಹೋದ. ಬೇಗ ರೆಡಿಯಾಗಿ ಡೈನಿಂಗ್ ಟೇಬಲ್‌ಗೆ ಬಂದ. ಅಷ್ಟರಲ್ಲೇ ಮಕ್ಕಳು ಅಲ್ಲಿಗೆ ಹಾಜರಾಗಿದ್ದರು. ನಾಲ್ವರು ಬೆಳಗಿನ ತಿಂಡಿ ತಿಂದು ಹಾಲು ಕುಡಿದರು. ಈ ಸಮಯದಲ್ಲೇ ರಾತ್ರಿ ನಡೆದ ಎಲ್ಲ ಘಟನೆಗಳನ್ನು ಇಂಚಿಂಚಾಗಿ ಕೃಷ್ಣ ತನ್ನ ಕುಟುಂಬಕ್ಕೆ ವಿವರಿಸಿದ. ಎಲ್ಲರ ಮನದಲ್ಲೂ ಸಂತೃಪ್ತಿಯ ಭಾವನೆ ಮೂಡಿತು. ಕೃಷ್ಣ ಹೊರಡುತ್ತಿದ್ದಂತೆ ರುಕ್ಮಿಣಿ ಕೈಗೊಂದು ಬ್ಯಾಗ್ ಕೊಟ್ಟು, ಶರಣಪ್ಪನಿಗೆ ನೀಡಿ ಎಂದಳು. ಕೃಷ್ಣನಿಗೆ ಆಕೆಯ ಕಾಳಜಿ ಅರ್ಥವಾಯಿತು.

ಮನೆಯಿಂದ ನೇರವಾಗಿ ಶರಣಪ್ಪನಿದ್ದ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಕೃಷ್ಣ ಹೋದ. ಶರಣಪ್ಪ ಕೊಂಚ ಚೇತರಿಸಿಕೊಂಡಿದ್ದ. ತನ್ನ ಕೆಲಸ ತಾನು ಮಾಡಿಕೊಳ್ಳುವಷ್ಟು ಶಕ್ತನಾಗಿದ್ದ. ಗೆಳೆಯನ ಆರೋಗ್ಯ ಚೇತರಿಕೆ ಕಂಡು ಕೃಷ್ಣನಿಗೂ ಸಮಾಧಾನ. ಇನ್ನೂ ಮೂರ್ನಾಲ್ಕು ದಿನ ಇಲ್ಲಿಯೇ ಇದ್ದು, ಚಿಕಿತ್ಸೆ ಪಡೆಯುವಂತೆ ಸೂಚಿಸಿದ. ಶರಣಪ್ಪ ಸಮ್ಮತಿಸಿದ ನಂತರ ಹೆಂಡತಿ ಕೊಟ್ಟಿದ್ದ ಊಟ ಹಾಗೂ ಹಣ್ಣಿನ ಬ್ಯಾಗ್‌ನ್ನು ಕೊಟ್ಟ.

ದಿನವೂ ಇಬ್ಬರೂ ಆಸ್ಪತ್ರೆಯಲ್ಲೇ ಭೇಟಿಯಾಗುತ್ತಿದ್ದರು. ಶರಣಪ್ಪ ಗುಣಮುಖನಾದ ನಂತರ ಸಹಜವಾಗಿ ಒಂದಷ್ಟು ಸೂಕ್ಷ್ಮ ವಿಷಯ ತಿಳಿಸಿದ ಕೃಷ್ಣ, ಆತನನ್ನು ಡಿಸ್‌ಚಾರ್ಜ್ ಮಾಡಿಸಿದ. ಮನೆಗೆ ಬಾರೋ... ಒಂದೆರಡು ದಿನ ಇದ್ದು, ವಿಶ್ರಮಿಸಿಕೊಂಡು ಹೋಗುವಂತೆ ಎಂದು ಕರೆದ. ಈಗ ಆಗಲ್ಲ, ಒಂದಷ್ಟು ಕೆಲಸವಿದೆ. ಇನ್ನೊಮ್ಮೆ ಬಂದಾಗ ಬರುವೆ. ಮನೆಯಲ್ಲಿ ಯಾರಿಗೂ ಅನಾರೋಗ್ಯದ ವಿಷಯ ಹೇಳಿಲ್ಲ. ಈಗಾಗಲೇ ವಿಳಂಬವಾಗಿದೆ. ಅನುಮಾನ ಬಂದು ಅವರು ಕಲಮಲಗೊಳ್ಳುವ ಮುನ್ನವೇ ಊರಿಗೆ ಹೋಗುವೆ. ಎಲ್ಲ ವಿಷಯವನ್ನು ಸಾವಧಾನವಾಗಿ ಹೇಳುವೆ. ಆಗ ನನಗೂ ನೆಮ್ಮದಿ. ನನ್ನ ಉಸಿರು ಇರೋ ತನಕ ನಿನ್ನ ಉಪಕಾರ ಮರೆಯಲ್ಲ ಕಣೋ. ನನ್ನ ಜೀವದಾತ ನೀನು ಎಂದು ಶರಣಪ್ಪ ಕೈಹಿಡಿದುಕೊಂಡ. ಇಬ್ಬರ ಕಣ್ಣಾಲಿಗಳು ತುಂಬಿದವು.



ಗೆಳೆಯನಿಗೆ ಆಯಾಸ ಆಗದಿರಲಿ ಎಂದು ರೈಲಿನ ಸ್ಲೀಪರ್ ಕೋಚ್‌ನಲ್ಲಿ ಟಿಕೆಟ್ ಕಾಯ್ದಿರಿಸಿದ್ದ ಕೃಷ್ಣ, ನಿಗದಿತ ಸಮಯಕ್ಕೂ ಮುನ್ನವೇ ಆಸ್ಪತ್ರೆಗೆ ಬಂದು, ಅವನಿಷ್ಟದ ಊಟವನ್ನು ಮನೆಯಿಂದಲೇ ತಂದು ಕೊಟ್ಟ. ದಾರಿಯಲ್ಲಿ ತಿನ್ನಲು ಬುತ್ತಿಯನ್ನು ತಂದಿದ್ದ. ಒಂದಷ್ಟು ಹಣ್ಣುಗಳು, ಗೋಡಂಬಿ, ಒಣದ್ರಾಕ್ಷಿ, ಪಿಸ್ತಾ, ಒಣಅಂಜೂರ ಇದ್ದವು. ಊಟವಾದ ನಂತರ ತನ್ನ ಕಾರಿನಲ್ಲೇ ಶರಣಪ್ಪನನ್ನು ಕ್ರಾಂತಿವೀರ ಸಂಗೊಳ್ಳಿ ರೈಲು ನಿಲ್ದಾಣಕ್ಕೆ ಕರೆದೊಯ್ದು ರೈಲನ್ನು ಹತ್ತಿಸಿದ. ನಂತರ ತನ್ನ ಕರ್ತವ್ಯಕ್ಕೆ ಮರಳಿದ.

ಇಂತಹ ವಿದ್ಯಮಾನಗಳು ಕೃಷ್ಣನಿಗೆ, ಅವನ ಕುಟುಂಬಕ್ಕೆ ಹೊಸತೇನು ಆಗಿರಲಿಲ್ಲ. ಕೆಲವೊಮ್ಮೆ ಕೃಷ್ಣನ ಜೇಬಿನಿಂದಲೇ ರೊಕ್ಕ ಖರ್ಚಾಗಿದ್ದುಂಟು. ಇದಕ್ಕೆಲ್ಲ ಆತನ ಕುಟುಂಬದ ಬೆಂಬಲವೂ ಇತ್ತು. ಒಬ್ಬರ ಜೀವ ಉಳಿಸಲು ಶ್ರಮಿಸುವುದು, ಹರಸಾಹಸ ಪಡುವುದು ಅವರಿಗೆಲ್ಲಾ ಅಭ್ಯಾಸವೂ ಆಗಿತ್ತು. ಆದ್ದರಿಂದ ಈ ಘಟನೆಯು ಅವರಿಗೇನು ವಿಶೇಷ ಅನ್ನಿಸಲಿಲ್ಲ. ಪ್ರತಿ ಊರಿನಲ್ಲೂ ಇಂತಹ ನಾಲ್ಕೈದು ಅನುಭವ ಇದ್ದವು. ಶರಣಪ್ಪ ಆಪ್ತನಾಗಿದ್ದರಿಂದ ಅದರ ನೆನಪು ಕುಟುಂಬಕ್ಕಿರಲಿಲ್ಲ. ಅನಾಮಧೇಯ ಚಿನ್ನದುಂಗುರದ ಮೂಲ ಪತ್ತೆಗಾಗಿ ಈ ಹಿಂದಿನ ಒಂದೊಂದೇ ಘಟನಾವಳಿಯನ್ನು ನೆನಪಿಸಿಕೊಳ್ಳುವಾಗ ಶರಣಪ್ಪನ ನೆನಪಾಯಿತು.

ಶರಣಪ್ಪನ ನೆನಪು ಬಂದೊಡನೆ ಕೃಷ್ಣನಿಗೆ ಆತನೇ ಬಂಗಾರದ ಉಂಗುರ ಕೊಟ್ಟವನು ಎಂಬುದು ಖಾತ್ರಿಯಾಯಿತು. ಕ್ಷಣವೂ ತಡಮಾಡದೆ ಫೋನ್ ಹಚ್ಚಿದ. ಏನೋ ದೋಸ್ತಾ... ನೀ ಹಿಂಗೆ ಮಾಡೋದೇನು? ಮೂರು ದಿನ ನನ್ನ ನೆಮ್ಮದಿ ಕಸಿದೆಯೆಲ್ಲೋ ಎಂದು ಬಡಬಡಿಸಿದ. ಅತ್ತ ಕಡೆಯಿಂದ ಶರಣಪ್ಪ 'ಕೊನೆಗೂ ಪತ್ತೆ ಮಾಡಿದೇನೋ? ನಿನ್ನ ಉಪಕಾರನ ಮರೆತೆ ಎಂದ ದಿನವೇ ಈ ಜೀವದ ಉಸಿರು ನಿಂತಂತೆ. ನನ್ನ ಪ್ರತಿ ಉಸಿರು ನೀನು ಕೊಟ್ಟ ಭಿಕ್ಷೆ ಕಣೋ. ಯಾವ ರೀತಿ ನಿನಗೆ ಕೃತಜ್ಞತೆ ಸಲ್ಲಿಸಬೇಕು ಎಂಬುದು ನನಗೆ ಗೊತ್ತಾಗಲಿಲ್ಲ. ನಿನ್ನ ಹೊಸಮನೆಯ ಗೃಹಪ್ರವೇಶ ಎಂದೊಡನೆ ಗಟ್ಟಿ ಬಂಗಾರದ ಒಂದು ತೊಲ ಸುತ್ತುಂಗುರ ತೆಗೆದುಕೊಂಡೆ. ನಮ್ಮ ಕಡೆ ಅತ್ಯಾಪ್ತರಿಗೆ ಕೊಡುವ ಉಡುಗೊರೆ ಕಣೋ ಅದು.

ಅದರ ಮೇಲೆ ನನ್ನ ಹೆಸರು ಬರೆದು ಕೊಟ್ಟಿದ್ದರೆ ನಾನೆಷ್ಟು ಅಲ್ಪನಾಗುತ್ತಿದೆ. ನನ್ನ ಪಾಲಿನ ದೈವ ಕಣೋ ನೀನು. ಈ ಉಸಿರು ನಿನ್ನದು. ಎಷ್ಟು ಕೊಟ್ಟರೂ ಸಾಲದು. ಈ ಅಲ್ಪನನ್ನು ಕ್ಷಮಿಸೋ. ಪ್ರೀತಿಯಿಂದ ಅದನ್ನು ನೀನು ಸದಾ ಹಾಕಿಕೊಂಡರೆ ನನಗೆ ಸಮಾಧಾನ ಕಣೋ. ಬಿಡುವು ಮಾಡಿಕೊಂಡು ಆಗಾಗ್ಗೆ ಹೆಂಡತಿ ಮಕ್ಕಳೊಂದಿಗೆ ನನ್ನ ಮನೆಗೆ ಬರೋದನ್ನು ಬಿಡಬೇಡ. ನಿನ್ನ ಸಾಂಗತ್ಯವೇ ನನ್ನ ಪ್ರಾಣವಾಯು ಕಣೋ' ಎಂದು ಶರಣಪ್ಪ ಗದ್ಗದಿತನಾದ.

ಕೃಷ್ಣನಿಗೆ ಚಿಂತೆ ಕಳೆದು ನಿರಾಳವಾದರೂ; ಮಿತ್ರನ ಮಾತುಗಳಿಂದ ಮನಸ್ಸು ತುಂಬಿತು. ಮಾತೇ ಹೊರಡಲಿಲ್ಲ. ಅಲ್ಲವೋ ಅದು ನಮ್ಮ ಕರ್ತವ್ಯ ಅಲ್ವೇನೋ. ಆ ಜಾಗದಲ್ಲಿ ಯಾರೇ ಇದ್ದರೂ ನಾ ಮಾಡುತ್ತಿದ್ದು ಅದೇ ಕೆಲಸವನ್ನು ಕಣೋ ಎಂದ. ನನ್ನ ಆದ್ಯತೆ ಜೀವ ಉಳಿಸೋದಕ್ಕೆ ಎಂದು ಕರ್ತವ್ಯದ ಪ್ರತಿಜ್ಞಾವಿಧಿಯನ್ನು ನೆನಪು ಮಾಡಿದ. ಜನರ ಸೇವೆಗೆ ಈ ಕಾಯ ಸದಾ ಮುಂದು ಎಂದ.



ಪ್ರತಿಕ್ರಿಯಿಸಿ:
**feedback@sudha.co.in**